### ಸಕ್ಕರೆ :

- ಎಕ್ಸ್‌ಮಿಲ್ ದರ ಹೆಚ್ಚಳದಿಂದ ಮುಂಬಯಿಯಲ್ಲಿ ಸಕ್ಕರೆ ದರ ಹೆಚ್ಚಳ
- ಉತ್ತರ ಪ್ರದೇಶದಲ್ಲಿ ಸಕ್ಕರೆ ಎಕ್ಸ್‌ಮಿಲ್ ದರ ಹೆಚ್ಚಳ
- 2016 ಮಾರ್ಚ್ 31ರ ತನಕ ಭಾರತದ ಸಕ್ಕರೆ ಉತ್ಪಾದನೆ 237 ಲಕ್ಷ ಟನ್‌ಗಳು ಹಾಗೂ ಇದು ಹಿಂದಿನ ವರ್ಷದ ಇದೇ ಸಮಯದ ಉತ್ಪಾದನೆಗಿಂತ 11 ಲಕ್ಷ ಟನ್ ಕಡಿಮೆಯೆಂದು ಭಾರತದ ಸಕ್ಕರೆ ಮಿಲ್‌ಗಳ ಸಂಘದ ಪ್ರಕಟನೆ ತಿಳಿಸಿದೆ. ಇದರಲ್ಲಿ ಹಿಂದಿನ ವರ್ಷದಲ್ಲಿ 93.6 ಲಕ್ಷ ಟನ್ ಉತ್ಪಾದಿಸಿದ ಮಹಾರಾಷ್ಟ್ರ ಈ ವರ್ಷ 82 ಲಕ್ಷ ಟನ್ ಉತ್ಪಾದಿಸಿದೆ. ಕರ್ನಾಟಕದ ಉತ್ಪಾದನೆ 42.47 ಲಕ್ಷ ಟನ್‌ಗಳಿಗಿಂತ 40.16 ಲಕ್ಷ ಟನ್‌ಗಳಿಗೆ ಇಳಿಕೆಯಾಗಿದೆ.

### ಬೇಳೆಕಾಳುಗಳು :

- ತೊಗರಿ, ಮಸೂರ್, ಕಡ್ಲೆ, ಬಿಳಿ ಬಟಾಣಿ ದರಗಳು ಮುಂಬಯಿಯಲ್ಲಿ ಉತ್ತಮ
- ದೆಹಲಿಯಲ್ಲಿ ಮಸೂರ್, ಉದ್ದು ದರಗಳು ಉತ್ತಮ, ತೊಗರಿ ದರ ಇಳಿಕೆ
- ಚೆನ್ನೈಯಲ್ಲಿ ಸತತ ಮೂರನೇ ದಿನ ಉದ್ದು ದರ ಹೆಚ್ಚಳ
- ಕಡ್ಲೆ ಫ್ಯೂಚರ್ ದರ ಹೆಚ್ಚಳ

### ಆಹಾರ ಧಾನ್ಯಗಳು :

- ಉತ್ತರ ಭಾರತದಲ್ಲಿ ಮಿಲ್‌ಗಳ ಖರೀದಿ ಹೆಚ್ಚಳದಿಂದ ಭತ್ತ ದರ ಹೆಚ್ಚಳ, ಅಕ್ಕಿ ದರ ಸ್ಥಿರ, ರಫ್ತು ಉತ್ತಮ ಗೊಳ್ಳುವ ಸಾಧ್ಯತೆ
- ಪ್ರಮುಖ ಮಾರುಕಟ್ಟೆಗಳಲ್ಲಿ ಗೋಧಿ ದರ ಸ್ಥಿರ

### ಖಾದ್ಯತೈಲಗಳು :

- ಮಹಾರಾಷ್ಟ್ರ, ತಮಿಳು ನಾಡುಗಳಲ್ಲಿ ಖಾದ್ಯತೈಲ ದರ ಸ್ಥಿರ
- ಗುಜರಾತ್‌ನಲ್ಲಿ ಖಾದ್ಯತೈಲ ದರ ಹೆಚ್ಚಳ

### ತೈಲಬೀಜಗಳು :

- ಪ್ರಮುಖ ಮಾರುಕಟ್ಟೆಗಳಲ್ಲಿ ಸೋಯಾಬೀನ್ ದರ ಉತ್ತಮದಿಂದ ಹೆಚ್ಚಳ
- ಪ್ರಮುಖ ಮಾರುಕಟ್ಟೆಗಳಲ್ಲಿ ಸಾಸಿವೆ ದರ ಪ್ರಬಲ

### ಮಸಾಲೆ ಪದಾರ್ಥಗಳು :

- ಕೆಂಪು ಮೆಣಸು ದರ ಸ್ಥಿರ, ಕಾಳು ಮೆಣಸು ದರ ಸ್ಥಿರ
- ಜೀರಿಗೆ, ಕೊತ್ತಂಬರಿ ಫ್ಯೂಚರ್ ದರ ಹೆಚ್ಚಳ